<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು</u>

<u>ಸಿ.ಸಿ.ನಂ.**3363/2023.**</u>

ದಿನಾಂಕ:**25-06-2026** ರಂದು ಮಧ್ಯಾಹ್ನ **04.05** ಗಂಟೆಗೆ ಸಾಕ್ಷಿಯು **video conference** ಮೂಲಕ ಹಾಜರಾಗಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಧನಂಜಯ್ | ಚಾಸಾ -12<br>ಪ್ರಾಸಾ -11 |
| ತಂದೆಯ ಹೆಸರು | ರಂಗೇಗೌಡ | |
| ವಯಸ್ಸು (ವರ್ಷಗಳಲ್ಲಿ) | 39 | |
| ಉದ್ಯೋಗ | ಪಿ ಎಸ್ ಐ | |
| ವಾಸ | ಬೆಂಗಳೂರು | |

ಮಾನ್ಯ ಸ.ಸ.ಅ.ರವರು ಹಾಗೂ ಆರೋಪಿ ಪರ ವಕೀಲರು ಸಹ: **video conference** ಮೂಲಕ ತೆರೆದ ನ್ಯಾಯಾಲಯದಲ್ಲಿಯೇ ಇದ್ದು ಹಾಜರಾಗಿರುತ್ತಾರೆ.

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:</u>

ನಾನು ದಿ:16.06.2023 ರಿಂದ 12.06.2024 ರ ವರೆಗೂ ಕಡೂರು ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ:20.06.2023 ರಂದು ಚಾಸಾ 1 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ತನಿಖೆ ಮುಂದುವರೆಸಿರುತ್ತೇನೆ. ದಿ:10.07.2023 ರಂದು ಎಫ್ ಎಸ್ ಎಲ್ ವರದಿಯನ್ನು ಟಾಪಾಲು ಮೂಲಕ ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ನಿಪಿ-6 ಸಾಕ್ಷಿಯ ಸಹಿ ನಿಪಿ 6ಎ ಎಂದು ಗುರುತಿಸಲಾಯಿತು. ನಂತರ, ಆರೋಪಿಯ ವಿರುದ್ಧ ಆರೋಪ ದೃಢಪಟ್ಟಿದ್ದರಿಂದ ಅಂತಿಮ ವರದಿ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್ ಎನ್ ಎಸ್ ವಕೀಲರಿಂದ:</u>

ನಿಪಿ 6 ವರದಿಯು ಟಾಪಾಲು ಮುಾಲಕ ಬಂದಿತ್ತು ಎಂದು ತೋರಿಸಲು ಅಂಚೆ ಕವರ್ ಅಥಾವ ಕವರಿಂಗ್ ಲೇಟರ್ ಅನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿಲ್ಲ. ನಿಪಿ 6 ನ್ನು ಸ್ವೀಕರಿಸಿದಾಗ ಸದರಿಯು ಯಾವ ಮುದ್ದೆ ಮಾಲಿಗೆ ಸಂಬಂಧಿಸಿದ್ದು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ನಿಪಿ6 ರಲ್ಲಿಯೇ ಸಂಪೂರ್ಣವಾಗಿ ನಮೂದಿಸಲಾಗಿದೆ ಎನ್ನುತ್ತಾರೆ. ನಿಪಿ 6 ರಲ್ಲಿ ಯಾವ ಬ್ಯಾಚ್ ನ ಮದ್ಯವನ್ನು

ರಾಸಾಯಾನಿಕ ವರದಿಗಾಗಿ ಕಳುಹಿಸಲಾಗಿತ್ತು ಎಂದು ನಮೂದಿಸಲಾಗಿಲ್ಲ ಎಂದರೆ ಸಾಕ್ಷಿಯು ಯಾವ ಮು.ಮಾಲನ್ನು ಕಳುಹಿಸಿದ್ದರೋ ಸದರಿ ವರದಿಯನ್ನು ನಾನು ಸ್ವೀಕರಿಸಿರುತ್ತೇನೆ ಎನ್ನುತ್ತಾರೆ. ನಿಪಿ 6 ರಲ್ಲಿ ಅಥಾವ ಅಂತಿಮ ವರದಿಯಲ್ಲಿ ಯಾವ ಯಾವ ಮು.ಮಾಲನ್ನು ರಾಸಾಯಾನಿಕ ವರದಿಗಾಗಿ ಕಳುಹಿಸಲಾಗಿತ್ತು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಚಾಸಾ1 ನನ್ನ ಮೇಲಾಧಿಕಾರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸಹೋದ್ಯೋಗಿ. ಚಾಸಾ 1 ರವರು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಅದನ್ನು ಸಮರ್ಥಿಸಲು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.